ಪೊಲೀಸ್ ಮಹಾ ನಿರ್ದೇಶಕರ
ಹಾಗೂ ಮಹಾ ನಿರ್ದೇಶಕರು
ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು
ಸೇವೆಗಳು ಹಾಗೂ ರಾಜ್ಯ ವಿಪತ್ತು ಸ್ಪಂದನಾ
ಪಡೆಯ ನಿರ್ದೇಶನಾಲಯ
ನಂ.1 ಅಣ್ಣಾಸ್ವಾಮಿ ಮೊದಲಿಯಾರ್ ರಸ್ತೆ
ಬೆಂಗಳೂರು-560 042

ದೂರವಾಣಿ : 080 25570733
22971501
22971507

File No.:KSFES/EST/COMP/2/2026 ದಿನಾಂಕ:22-01-2026

ಗೆ,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಿಸಿಎಎಸ್)
ಒಳಾಡಳಿತ ಇಲಾಖೆ
ವಿಧಾನಸೌಧ
ಡಾ.ಬಿ.ಆರ್.ಅಂಬೇಡ್ಕರ ವೀದಿ
ಬೆಂಗಳೂರು-01

ಮಾನ್ಯರೆ,

**ವಿಷಯ:-** ಕರ್ನಾಟಕ ರಾಜ್ಯಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ "ಫೈರ್ ಆಪರೇಟರ್" ಹುದ್ದೆಯ ಪದನಾಮೀಕರಣ ಹಾಗೂ ಕರಡು ವೃಂದ & ನೇಮಕಾತಿ ನಿಯಮಕ್ಕೆ ಮಂಜೂರಾತಿ ನೀಡುವ ಬಗ್ಗೆ

**ಉಲ್ಲೇಖ:-** ಇಲಾಖಾ ವೃಂದ & ನೇಮಕಾತಿ ಸಮಿತಿ ಸಭೆಯ ನಿರ್ಣಯದಂತೆ.

****************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯಲ್ಲಿ ನಿಯೋಜನೆ ಹುದ್ದೆಗಳನ್ನು ಒಳಗೊಂಡಂತೆ ಒಟ್ಟು 7313 ಹುದ್ದೆಗಳು ಮಂಜೂರಾಗಿದ್ದು, ಇವುಗಳಲ್ಲಿ ಅಗ್ನಿಶಾಮಕ ಠಾಣಾಧಿಕಾರಿ, ಅಗ್ನಿಶಾಮಕ ಚಾಲಕ, ಚಾಲಕ ತಂತ್ರಜ್ಞ ಹಾಗೂ ಅಗ್ನಿಶಾಮಕ ಸೇರಿದಂತೆ ಒಟ್ಟು 5523 ನೇರ ನೇಮಕಾತಿ ಹುದ್ದೆಗಳಾಗಿರುತ್ತವೆ. ಆಡಳಿತಾತ್ಮಕ ಹಿತದೃಷ್ಟಿ ಹಾಗೂ ಆರ್ಥಿಕ ಮಿತವ್ಯಯ ಸಾಧಿಸುವ ಉದ್ದೇಶದಿಂದಾಗಿ, ಇಲಾಖೆಯಲ್ಲಿನ ಕೆಳಹಂತದ 3 ವೃಂದಗಳ ಹುದ್ದೆಗಳಾದ (1) ಅಗ್ನಿಶಾಮಕ, (2) ಅಗ್ನಿಶಾಮಕ ಚಾಲಕ & (3) ಚಾಲಕ ತಂತ್ರಜ್ಞ ಹುದ್ದೆಗಳನ್ನು ಒಂದುಗೂಡಿಸಿ, "ಫೈರ್ ಆಪರೇಟರ್ (Fire Operator)" ವೃಂದ ಎಂದು ಹೆಸರಿಸಿ ಮರು ಪದನಾಮೀಕರಿಸಲು ಇಲಾಖೆಯು ಯೋಜಿಸಿ, ಈ ಕೆಳಕಂಡಂತೆ ಪ್ರಸ್ತಾವನೆಯನ್ನು ಸಲ್ಲಿಸಿದೆ.

2. ಇಲಾಖೆಯಲ್ಲಿ ಪ್ರಸ್ತುತ ಅಗ್ನಿಶಾಮಕ ಠಾಣಾಧಿಕಾರಿ, ಚಾಲಕ ತಂತ್ರಜ್ಞ, ಅಗ್ನಿಶಾಮಕ ಚಾಲಕ ಮತ್ತು ಅಗ್ನಿಶಾಮಕ, ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲಾಗುತ್ತಿದೆ. ಈ ಹುದ್ದೆಗಳ ಮಂಜೂರಾತಿ, ಭರ್ತಿ ಹಾಗೂ ಖಾಲಿ ಸ್ಥಾನಗಳ ವಿವರ & ಶೇಕಡವಾರು ವಿವರ ಈ ಕೆಳಗಿನಂತಿವೆ.

<u>ಎ) ಸದರಿ ವೃಂದಗಳ ಬಲಾಬಲ:</u>

| ಕ್ರ ಸಂ | ಹುದ್ದೆಯ ಹೆಸರು & ವೇತನ ಶ್ರೇಣಿ | ನೇಮಕಾತಿ ವಿದ್ಯಾರ್ಹತೆ | ಮಂಜೂರಾಗಿರುವ ಹುದ್ದೆಗಳ ಸಂಖ್ಯೆ & ಇಲಾಖೆಯಲ್ಲಿ ಮಂಜೂರಾದ ಹುದ್ದೆಗಳ ಶೇಕಡವಾರು | ಮುಂದಿನ ಪದೋನ್ನತಿ ಹುದ್ದೆ & ವೇತನ ಶ್ರೇಣಿ | ಮಂಜೂರಾದ ಹುದ್ದೆಗಳ ಸಂಖ್ಯೆ | ಇಲಾಖೆಯಲ್ಲಿ ಮಂಜೂರಾದ ಒಟ್ಟು ಹುದ್ದೆಗಳಲ್ಲಿ ಅಗ್ನಿಶಾಮಕ + ಪ್ರಮುಖ ಅಗ್ನಿಶಾಮಕರು ಹೊಂದಿರುವ ಶೇಕಡವಾರು ಪಾಲು |
|---|---|---|---|---|---|---|
| | | | | | | |

| | | | | | | |
|---|---|---|---|---|---|---|
| 01 | ಅಗ್ನಿಶಾಮಕ 37500-76100 | ಎಸ್.ಎಸ್. ಎಲ್.ಸಿ | 4103<br><br>56.10 % (7313) | ಪ್ರಮುಖ ಅಗ್ನಿಶಾಮಕ 44425-83700 | 1073 | **4103 + 1073= 5176**<br>**70.77%** |
| 02 | ಅಗ್ನಿಶಾಮಕ ಚಾಲಕ 44425-83700 | ಎಸ್.ಎಸ್. ಎಲ್.ಸಿ + ಭಾರೀ ವಾಹನ ಚಾಲನೆ | 1195+15=. 1210<br>16.55% (7313) | ಸಹಾಯಕ ಅ.ಶಾ. ಠಾಣಾಧಿಕಾರಿ 49050-92500 | 73 | **1210+192+73= 1475**<br>**20.16%** |
| 03 | ಚಾಲಕ ತಂತ್ರಜ್ಞ 44425-83700 | ಎಸ್.ಎಸ್. ಎಲ್.ಸಿ + ಭಾರೀ ವಾಹನ ಚಾಲನೆ+ ಐ.ಟಿ.ಐ | 192<br><br>2.62% (7313) | | | |

**3. ಸದರಿ ಹುದ್ದೆಗಳ ವಿದ್ಯಾರ್ಹತೆ & ನೇಮಕಾತಿ ವಿಧಾನ**

(i) ಇಲಾಖೆಯಲ್ಲಿ ಪ್ರಸ್ತುತ **ಅಗ್ನಿಶಾಮಕ** ಹುದ್ದೆಗೆ ಎಸ್.ಎಸ್.ಎಲ್.ಸಿ. ಉತ್ತೀರ್ಣತೆಯ ಆಧಾರದ ಮೇರೆಗೆ **ನೇರ ನೇಮಕಾತಿ** ಮಾಡಿಕೊಳ್ಳುತ್ತಿದ್ದು, ಈ ಹುದ್ದೆಗೆ ವೇತನ ಶ್ರೇಣಿ ರೂ.37500-76100 ನಿಗದಿಪಡಿಸಲಾಗಿರುತ್ತದೆ. ಮುಂದುವರೆದಂತೆ ಈ ಹುದ್ದೆಯಿಂದ ಪ್ರಮುಖ ಅಗ್ನಿಶಾಮಕ ಹುದ್ದೆಗೆ ಪದೋನ್ನತಿ ನೀಡಲಾಗುತ್ತಿದೆ.

(ii) **ಅಗ್ನಿಶಾಮಕ ಚಾಲಕ** ಹುದ್ದೆಗೆ ಎಸ್.ಎಸ್.ಎಲ್.ಸಿ. ಉತ್ತೀರ್ಣನತೆ ಹಾಗೂ **ಭಾರೀ ವಾಹನ ಚಾಲನಾ ಪರವಾನಿಗೆ** ಆಧಾರದ ಮೇರೆಗೆ **ನೇರ ನೇಮಕಾತಿ** ಮಾಡಿಕೊಳ್ಳುತ್ತಿದ್ದು, ಈ ಹುದ್ದೆಗೆ ವೇತನ ಶ್ರೇಣಿ ರೂ.44425-83700 ನಿಗದಿಪಡಿಸಲಾಗಿರುತ್ತದೆ.

(iii) **ಚಾಲಕ ತಂತ್ರಜ್ಞ** ಹುದ್ದೆಗೆ ಎಸ್.ಎಸ್.ಎಲ್.ಸಿ. ಉತ್ತೀರ್ಣನತೆ, ಐ.ಟಿ.ಐ. ಹಾಗೂ **ಭಾರೀ ವಾಹನ ಚಾಲನಾ ಪರವಾನಿಗೆ** ಆಧಾರದ ಮೇರೆಗೆ **ನೇರ ನೇಮಕಾತಿ** ಮಾಡಿಕೊಳ್ಳುತ್ತಿದ್ದು, ಈ ಹುದ್ದೆಗೆ ವೇತನ ಶ್ರೇಣಿ ರೂ.44425-83700 ನಿಗದಿಪಡಿಸಲಾಗಿರುತ್ತದೆ.

4. **ಇಲಾಖೆಯಲ್ಲಿ ಅಗ್ನಿಶಾಮಕ, ಅಗ್ನಿಶಾಮಕ ಚಾಲಕ & ಚಾಲಕ ತಂತ್ರಜ್ಞ ರವರ ಪದೋನ್ನತಿ ಹಂತಗಳು:**

- ಇಲಾಖೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಅಗ್ನಿಶಾಮಕ ಹುದ್ದೆಗಳು ಇದ್ದು, ಅಗ್ನಿಶಾಮಕರುಗಳು ಪ್ರಮುಖ ಅಗ್ನಿಶಾಮಕರಾಗಿ ಪದೋನ್ನತಿ ಪಡೆದ ನಂತರವೇ ಸಹಾಯಕ ಅಗ್ನಿಶಾಮಕ ಠಾಣಾಧಿಕಾರಿಯಾಗಿ ಪದೋನ್ನತಿ ನೀಡಲಾಗುತ್ತಿದೆ.
- ಕಡಿಮೆ ಸಂಖ್ಯೆಯಲ್ಲಿರುವ ಅಗ್ನಿಶಾಮಕ ಚಾಲಕ & ಚಾಲಕ ತಂತ್ರಜ್ಞ ರವರುಗಳು ಪದೋನ್ನತಿಯಲ್ಲಿ ನೇರವಾಗಿ ಸಹಾಯಕ ಅಗ್ನಿಶಾಮಕ ಠಾಣಾಧಿಕಾರಿ ಹುದ್ದೆಗೆ ಪದೋನ್ನತಿ ನೀಡುತ್ತಿರುವುದರಿಂದ ಅಗ್ನಿಶಾಮಕ, ಅಗ್ನಿಶಾಮಕ ಚಾಲಕ & ಚಾಲಕ ತಂತ್ರಜ್ಞ ಹುದ್ದೆಗಳ ಪದೋನ್ನತಿಯಲ್ಲಿ ತಾರತಮ್ಯ ಉಂಟಾಗುತ್ತಿವೆ.

5. ಹಾಲೀ ಇಲಾಖೆಯಲ್ಲಿ ನೂತನ ತಂತ್ರಜ್ಞಾನವುಳ್ಳ ಅಗ್ನಿಶಾಮಕ ವಾಹನಗಳು, ಆಧುನಿಕ ಸಲಕರಣೆಗಳ ಮೂಲಕ ಇಲಾಖೆಯು ಆಧುನೀಕರಣಗೊಳ್ಳುತ್ತಿದ್ದು, ಇದರಂತೆ ನೇರ ನೇಮಕಾತಿಯ ವಿಷಯದಲ್ಲಿ ಕೆಲವೊಂದು ಬದಲಾವಣೆ ತರುವ ಉದ್ದೇಶದಿಂದ ಹೊರ ರಾಜ್ಯಗಳಾದ ದೆಹಲಿ, ಒಡಿಸಾ ಹಾಗೂ ಇತರೆ ರಾಜ್ಯಗಳಲ್ಲಿ ನೇರ ನೇಮಕಾತಿ ಮೂಲಕ "ಫೈರ್ ಆಪರೇಟರ್" ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗುತ್ತಿದ್ದು, ಬೇರೆ ರಾಜ್ಯಗಳಲ್ಲಿರುವಂತೆ "ಫೈರ್ ಆಪರೇಟರ್" (Fire Operator) ನೇಮಕಾತಿ ಮಾನದಂಡಗಳನ್ನು ವೃಂದ

& ನೇಮಕಾತಿ ಸಮಿತಿ ಸಭೆಯಲ್ಲಿ ಅಭ್ಯಸಿಸಿದ್ದು, ಅಲ್ಲಿನ ನೇಮಕಾತಿ ನಿಯಮಗಳು ಹಾಗೂ ಪದೋನ್ನತಿ, ಕರ್ತವ್ಯ ನಿರ್ವಹಣೆ ಒಳಗೊಂಡ ಮಾಹಿತಿಗಳು ಈ ಕೆಳಕಂಡಂತೆ ಇರುತ್ತವೆ.

ಎ) ದೆಹಲಿಯಲ್ಲಿ ಈ ಮೂರು ಹುದ್ದೆಗಳಾದ ಅಗ್ನಿಶಾಮಕ, ಅಗ್ನಿಶಾಮಕ ಚಾಲಕ ಮತ್ತು ಚಾಲಕ ತಂತ್ರಜ್ಞ ಹುದ್ದೆಗಳ ಬದಲಿಗೆ "Fire Operator" ಎಂದು ನೇಮಕ ಮಾಡಿಕೊಂಡು ಕರ್ತವ್ಯ ನಿರ್ವಹಿಸಲಾಗುತ್ತಿದೆ. ಅಂದರೆ, ಅಗ್ನಿಶಮನ ಕಾರ್ಯ, ರಕ್ಷಣಾ ಕಾರ್ಯ ಹಾಗೂ ಎಲ್ಲಾ ವಿವಿಧ ರೀತಿಯ ವಾಹನ ಚಾಲನೆ ಮತ್ತು ಉಪಕರಣಗಳ ಚಾಲನೆಯನ್ನು ಪ್ರತಿಯೊಬ್ಬ Fire Operator ನಿರ್ವಹಿಸುತ್ತಾರೆ.

(i) ಪ್ರತ್ಯೇಕವಾಗಿ ಚಾಲಕರ ನೇಮಕ ಮತ್ತು ತಾಂತ್ರಿಕ ತಂತ್ರಜ್ಞರನ್ನು ನೇಮಕ ಮಾಡಿಕೊಳ್ಳುವ ಅವಶ್ಯಕತೆಯಿರುವುದಿಲ್ಲ ಹಾಗೂ ಸರ್ಕಾರಕ್ಕೆ ಆರ್ಥಿಕ ಹೊರೆ ಕಡಿಮೆಯಾಗುತ್ತದೆ.

(ii) ಪ್ರಸ್ತುತ ಪದೋನ್ನತಿ ನೀಡುವಲ್ಲಿ ಅಗ್ನಿಶಾಮಕ ಸಿಬ್ಬಂದಿಗಳಿಗೆ ಅತೃಪ್ತಿಯಿದ್ದು, ಎಲ್ಲಾ ಹುದ್ದೆಗಳನ್ನು ಸೇರಿಸಿ, **Fire Operator** ಹುದ್ದೆಯೆಂದು ನೇಮಕ ಮಾಡಿಕೊಳ್ಳುವುದರಿಂದ ಎಲ್ಲಾ ಕೆಲಸಗಳು ಈ ಹುದ್ದೆಯಲ್ಲಿಯೇ ನಿರ್ವಹಣೆ ಮಾಡಲಾಗುತ್ತದೆ ಹಾಗೂ ಪದೋನ್ನತಿಯನ್ನು ಒಂದೇ ಜೇಷ್ಠತಾ ಆಧಾರದಲ್ಲಿ ನೀಡುವುದರಿಂದ ಯಾವುದೇ ಸಿಬ್ಬಂದಿಗೆ ಅತೃಪ್ತಿಯು ಉಂಟಾಗುವುದಿಲ್ಲ.

(iii) ಬೇರೆ ಬೇರೆ ಹುದ್ದೆಗಳಿಗೆ ಪ್ರತ್ಯೇಕ ತರಬೇತಿ ನೀಡುತ್ತಿರುವುದರಿಂದ ಕಾಲ ವಿಳಂಭ ಹಾಗೂ ಆರ್ಥಿಕ ಹೊರೆಯಾಗುತ್ತಿದ್ದು, ಇದರ ಬದಲಿಗೆ, **"Fire Operator"** ನೇಮಕ ಮಾಡಿಕೊಳ್ಳುವುದರಿಂದ ಒಂದೇ ರೀತಿಯ ತರಬೇತಿಯನ್ನು ನೀಡುವುದರಿಂದ **ಕಾಲ ವಿಳಂಭ ಹಾಗೂ ಆರ್ಥಿಕ ಹೊರೆಯನ್ನು ಕಡಿಮೆ ಮಾಡಬಹುದಾಗಿರುತ್ತದೆ.**

(v) ಪ್ರಸ್ತುತ ಇಲಾಖೆಯಲ್ಲಿ ಅತ್ಯಾಧುನಿಕ ತಂತ್ರಜ್ಞಾನವನ್ನು ಹೊಂದಿರುವ ವಾಹನಗಳು ಇರುವುದರಿಂದ ಈ ವಾಹನಗಳ ದುರಸ್ಥಿಯನ್ನು ಆಯಾಯ ಷೋರೂಂ ಗಳಲ್ಲಿಯೇ ಮಾಡಿಸುವುದರಿಂದ ಚಾಲಕ ತಂತ್ರಜ್ಞ ಹುದ್ದೆಗಳನ್ನು ವಿಲೀನ ಗೊಳಿಸಿ **Fire Operator** ನೇಮಕ ಮಾಡಿಕೊಳ್ಳುವುದು ಉತ್ತಮವಾಗಿರುತ್ತದೆ.

(vi) ಇಲಾಖೆಯಲ್ಲಿ ಒಂದೇ ರೀತಿಯ ನೇಮಕಾತಿ & ತರಬೇತಿ ನೀಡುವುದರಿಂದ ಸಿಬ್ಬಂದಿಗಳ ಕಾರ್ಯನಿರ್ವಹಣೆ ಹಾಗೂ ದಕ್ಷತೆಯನ್ನು ಸದೃಡಗೊಳಿಸಬಹುದಾಗಿರುತ್ತದೆ.

5. ಈ ಹಿನ್ನಲೆಯಲ್ಲಿ ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯಲ್ಲಿ ಅಗ್ನಿಶಾಮಕ, ಅಗ್ನಿಶಾಮಕ ಚಾಲಕ ಮತ್ತು ಚಾಲಕ ತಂತ್ರಜ್ಞ ಹುದ್ದೆಗಳ ಬದಲಾಗಿ Fire Operator ಹುದ್ದೆಯನ್ನು ನೇರ ನೇಮಕಾತಿ ಎಂದು ಪರಿಗಣಿಸಿ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅಳವಡಿಸಿಕೊಳ್ಳಲು ಇಲಾಖಾ ವೃಂದ & ನೇಮಕಾತಿ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ.

6. ಪ್ರಸ್ತುತ ಇಲಾಖೆಯಲ್ಲಿ ನಿಯೋಜನೆ ಹುದ್ದೆಗಳನ್ನು ಅಗ್ನಿಶಾಮಕ ಚಾಲಕ, ಚಾಲಕ ತಂತ್ರಜ್ಞ ಹಾಗೂ ಅಗ್ನಿಶಾಮಕ ಹುದ್ದೆಗಳ ಮಂಜೂರಾತಿ, ಭರ್ತಿ ಹಾಗೂ ಖಾಲಿ ಸ್ಥಾನಗಳ ವಿವರ ಈ ಕೆಳಕಂಡಂತಿರುತ್ತವೆ:

| ಕ್ರ.ಸಂ | ಹುದ್ದೆಗಳ ವಿವರ | ವೇತನ ಶ್ರೇಣಿ | ಮಂಜೂರಾತಿ ಸಂಖ್ಯೆ | ಭರ್ತಿ ಹುದ್ದೆಗಳು | ಖಾಲಿ ಹುದ್ದೆಗಳು | ಒಟ್ಟು |
|---|---|---|---|---|---|---|
| 01 | ಅಗ್ನಿಶಾಮಕ ಚಾಲಕ | 44425-83700 | 1195+15= 1210 | 916 | 294 | 1828 |
| 02 | ಚಾಲಕ ತಂತ್ರಜ್ಞ | 44425-83700 | 192 | 160 | 32 | |
| 03 | ಅಗ್ನಿಶಾಮಕ | 37500-76100 | 4000+103= 4103 | 2601 | 1502 | |

7. ಇಲಾಖೆಯಲ್ಲಿ ಅಗ್ನಿಶಾಮಕ ಚಾಲಕ, ಚಾಲಕ ತಂತ್ರಜ್ಞ ಹಾಗೂ ಅಗ್ನಿಶಾಮಕ ಹುದ್ದೆಗಳ ಮಂಜೂರಾತಿಯಲ್ಲಿ ಒಟ್ಟು 1828 ಹುದ್ದೆಗಳು ಖಾಲಿ ಇದ್ದು, 03 ಹುದ್ದೆಗಳ ಬದಲಿಗೆ ಇನ್ನು ಮುಂದೆ **"ಫೈರ್ ಆಪೇಟರ್"**(Fire Operator) ಹುದ್ದೆಯನ್ನು ನೇರ ನೇಮಕಾತಿಯ ಮೂಲಕ ಭರ್ತಿ ಮಾಡಿಕೊಳ್ಳಬಹುದಾಗಿದ್ದು, ಈ ಹುದ್ದೆಗೆ ಅಗ್ನಿಶಾಮಕ ಹುದ್ದೆಗೆ ನಿಗದಿಪಡಿಸಲಾಗಿರುವ ವೇತನ ಶ್ರೇಣಿ

& ನೇಮಕಾತಿ ಸಮಿತಿ ಸಭೆಯಲ್ಲಿ ಅಭ್ಯಸಿಸಿದ್ದು, ಅಲ್ಲಿನ ನೇಮಕಾತಿ ನಿಯಮಗಳು ಹಾಗೂ ಪದೋನ್ನತಿ , ಕರ್ತವ್ಯ ನಿರ್ವಹಣೆ ಒಳಗೊಂಡ ಮಾಹಿತಿಗಳು ಈ ಕೆಳಕಂಡಂತೆ ಇರುತ್ತವೆ.

ಎ) ದೆಹಲಿಯಲ್ಲಿ ಈ ಮೂರು ಹುದ್ದೆಗಳಾದ ಅಗ್ನಿಶಾಮಕ, ಅಗ್ನಿಶಾಮಕ ಚಾಲಕ ಮತ್ತು ಚಾಲಕ ತಂತ್ರಜ್ಞ ಹುದ್ದೆಗಳ ಬದಲಿಗೆ "Fire Operator" ಎಂದು ನೇಮಕ ಮಾಡಿಕೊಂಡು ಕರ್ತವ್ಯ ನಿರ್ವಹಿಸಲಾಗುತ್ತಿದೆ. ಅಂದರೆ, ಅಗ್ನಿಶಮನ ಕಾರ್ಯ, ರಕ್ಷಣಾ ಕಾರ್ಯ ಹಾಗೂ ಎಲ್ಲಾ ವಿವಿಧ ರೀತಿಯ ವಾಹನ ಚಾಲನೆ ಮತ್ತು ಉಪಕರಣಗಳ ಚಾಲನೆಯನ್ನು ಪ್ರತಿಯೊಬ್ಬ Fire Operator ನಿರ್ವಹಿಸುತ್ತಾರೆ.

(i) ಪ್ರತ್ಯೇಕವಾಗಿ ಚಾಲಕರ ನೇಮಕ ಮತ್ತು ತಾಂತ್ರಿಕ ತಂತ್ರಜ್ಞರನ್ನು ನೇಮಕ ಮಾಡಿಕೊಳ್ಳುವ ಅವಶ್ಯಕತೆಯಿರುವುದಿಲ್ಲ ಹಾಗೂ ಸರ್ಕಾರಕ್ಕೆ ಆರ್ಥಿಕ ಹೊರೆ ಕಡಿಮೆಯಾಗುತ್ತದೆ.

(ii) ಪ್ರಸ್ತುತ ಪದೋನ್ನತಿ ನೀಡುವಲ್ಲಿ ಅಗ್ನಿಶಾಮಕ ಸಿಬ್ಬಂದಿಗಳಿಗೆ ಅತೃಪ್ತಿಯಿದ್ದು, ಎಲ್ಲಾ ಹುದ್ದೆಗಳನ್ನು ಸೇರಿಸಿ, **Fire Operator** ಹುದ್ದೆಯೆಂದು ನೇಮಕ ಮಾಡಿಕೊಳ್ಳುವುದರಿಂದ ಎಲ್ಲಾ ಕೆಲಸಗಳು ಈ ಹುದ್ದೆಯಲ್ಲಿಯೇ ನಿರ್ವಹಣೆ ಮಾಡಲಾಗುತ್ತದೆ ಹಾಗೂ ಪದೋನ್ನತಿಯನ್ನು ಒಂದೇ ಜೇಷ್ಠತಾ ಆಧಾರದಲ್ಲಿ ನೀಡುವುದರಿಂದ ಯಾವುದೇ ಸಿಬ್ಬಂದಿಗೆ ಅತೃಪ್ತಿಯು ಉಂಟಾಗುವುದಿಲ್ಲ.

(iii) ಬೇರೆ ಬೇರೆ ಹುದ್ದೆಗಳಿಗೆ ಪ್ರತ್ಯೇಕ ತರಬೇತಿ ನೀಡುತ್ತಿರುವುದರಿಂದ ಕಾಲ ವಿಳಂಭ ಹಾಗೂ ಆರ್ಥಿಕ ಹೊರೆಯಾಗುತ್ತಿದ್ದು, ಇದರ ಬದಲಿಗೆ, "**Fire Operator**" ನೇಮಕ ಮಾಡಿಕೊಳ್ಳುವುದರಿಂದ ಒಂದೇ ರೀತಿಯ ತರಬೇತಿಯನ್ನು ನೀಡುವುದರಿಂದ **ಕಾಲ ವಿಳಂಭ ಹಾಗೂ ಆರ್ಥಿಕ ಹೊರೆಯನ್ನು ಕಡಿಮೆ ಮಾಡಬಹುದಾಗಿರುತ್ತದೆ.**

(v) ಪ್ರಸ್ತುತ ಇಲಾಖೆಯಲ್ಲಿ ಅತ್ಯಾಧುನಿಕ ತಂತ್ರಜ್ಞಾನವನ್ನು ಹೊಂದಿರುವ ವಾಹನಗಳು ಇರುವುದರಿಂದ ಈ ವಾಹನಗಳ ದುರಸ್ಥಿಯನ್ನು ಆಯಾಯ ಷೋರೂಂ ಗಳಲ್ಲಿಯೇ ಮಾಡಿಸುವುದರಿಂದ ಚಾಲಕ ತಂತ್ರಜ್ಞ ಹುದ್ದೆಗಳನ್ನು ವಿಲೀನ ಗೊಳಿಸಿ **Fire Operator** ನೇಮಕ ಮಾಡಿಕೊಳ್ಳುವುದು ಉತ್ತಮವಾಗಿರುತ್ತದೆ.

(vi) ಇಲಾಖೆಯಲ್ಲಿ ಒಂದೇ ರೀತಿಯ ನೇಮಕಾತಿ & ತರಬೇತಿ ನೀಡುವುದರಿಂದ ಸಿಬ್ಬಂದಿಗಳ ಕಾರ್ಯನಿರ್ವಹಣೆ ಹಾಗೂ ದಕ್ಷತೆಯನ್ನು ಸದೃಡಗೊಳಿಸಬಹುದಾಗಿರುತ್ತದೆ.

5. ಈ ಹಿನ್ನಲೆಯಲ್ಲಿ ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯಲ್ಲಿ ಅಗ್ನಿಶಾಮಕ, ಅಗ್ನಿಶಾಮಕ ಚಾಲಕ ಮತ್ತು ಚಾಲಕ ತಂತ್ರಜ್ಞ ಹುದ್ದೆಗಳ ಬದಲಾಗಿ Fire Operator ಹುದ್ದೆಯನ್ನು ನೇರ ನೇಮಕಾತಿ ಎಂದು ಪರಿಗಣಿಸಿ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅಳವಡಿಸಿಕೊಳ್ಳಲು ಇಲಾಖಾ ವೃಂದ & ನೇಮಕಾತಿ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ.

6. ಪ್ರಸ್ತುತ ಇಲಾಖೆಯಲ್ಲಿ ನಿಯೋಜನೆ ಹುದ್ದೆಗಳನ್ನು ಅಗ್ನಿಶಾಮಕ ಚಾಲಕ, ಚಾಲಕ ತಂತ್ರಜ್ಞ ಹಾಗೂ ಅಗ್ನಿಶಾಮಕ ಹುದ್ದೆಗಳ ಮಂಜೂರಾತಿ, ಭರ್ತಿ ಹಾಗೂ ಖಾಲಿ ಸ್ಥಾನಗಳ ವಿವರ ಈ ಕೆಳಕಂಡಂತಿರುತ್ತವೆ:

| ಕ್ರ.ಸಂ | ಹುದ್ದೆಗಳ ವಿವರ | ವೇತನ ಶ್ರೇಣಿ | ಮಂಜೂರಾತಿ ಸಂಖ್ಯೆ | ಭರ್ತಿ ಹುದ್ದೆಗಳು | ಖಾಲಿ ಹುದ್ದೆಗಳು | ಒಟ್ಟು |
|---|---|---|---|---|---|---|
| 01 | ಅಗ್ನಿಶಾಮಕ ಚಾಲಕ | 44425-83700 | 1195+15= 1210 | 916 | 294 | 1828 |
| 02 | ಚಾಲಕ ತಂತ್ರಜ್ಞ | 44425-83700 | 192 | 160 | 32 | |
| 03 | ಅಗ್ನಿಶಾಮಕ | 37500-76100 | 4000+103= 4103 | 2601 | 1502 | |

7. ಇಲಾಖೆಯಲ್ಲಿ ಅಗ್ನಿಶಾಮಕ ಚಾಲಕ, ಚಾಲಕ ತಂತ್ರಜ್ಞ ಹಾಗೂ ಅಗ್ನಿಶಾಮಕ ಹುದ್ದೆಗಳ ಮಂಜೂರಾತಿಯಲ್ಲಿ ಒಟ್ಟು 1828 ಹುದ್ದೆಗಳು ಖಾಲಿ ಇದ್ದು, 03 ಹುದ್ದೆಗಳ ಬದಲಿಗೆ ಇನ್ನು ಮುಂದೆ "**ಫೈರ್ ಆಪೇಟರ್**"(Fire Operator) ಹುದ್ದೆಯನ್ನು ನೇರ ನೇಮಕಾತಿಯ ಮೂಲಕ ಭರ್ತಿ ಮಾಡಿಕೊಳ್ಳಬಹುದಾಗಿದ್ದು, ಈ ಹುದ್ದೆಗೆ ಅಗ್ನಿಶಾಮಕ ಹುದ್ದೆಗೆ ನಿಗದಿಪಡಿಸಲಾಗಿರುವ ವೇತನ ಶ್ರೇಣಿ

ರೂ.37500-900-39300-1000-43300- 1125-47800-1250-52800-1375-58300-1500-64300-1650-74200-1900-76100 ನಿಗದಿಪಡಿಸಬಹುದಾಗಿರುತ್ತದೆ. ಇದರಿಂದ ಇಲಾಖೆಯಲ್ಲಿ ಹಾಲೀ ಇರುವ ಅಗ್ನಿಶಾಮಕ ಚಾಲಕ, ಚಾಲಕ ತಂತ್ರಜ್ಞ ಹಾಗೂ ಅಗ್ನಿಶಾಮಕ ಹುದ್ದೆಗಳಿಗೆ ಬದಲಾಗಿ ಒಂದೇ ನೇರ ನೇಮಕಾತಿಯಾದ **"ಫೈರ್ ಆಪರೇಟರ್"** ಹುದ್ದೆಯನ್ನು ನೇರ ನೇಮಕಾತಿಯ ಮೂಲಕ ಭರ್ತಿ ಮಾಡಿಕೊಳ್ಳಬಹುದಾಗಿರುತ್ತದೆ.

8. ಹಾಲೀ ಕರ್ತವ್ಯದಲ್ಲಿರುವ ಅಗ್ನಿಶಾಮಕ ಚಾಲಕ, ಚಾಲಕ ತಂತ್ರಜ್ಞ ಹಾಗೂ ಅಗ್ನಿಶಾಮಕರುಗಳು ಪದೋನ್ನತಿ, ಸೇವೆಯಿಂದ ವಜಾ ಹಾಗೂ ಇತರೆ ಕಾರಣಗಳಿಂದ ಹುದ್ದೆಗಳು ಖಾಲಿ ಸ್ಥಾನಗಳು ಉಂಟಾದಲ್ಲಿ ಇವುಗಳನ್ನು ಸಹ **"ಫೈರ್ ಆಪರೇಟರ್"** ಹುದ್ದೆಗಳಾಗಿ ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲಾಗುವುದು.

9. **"ಫೈರ್ ಆಪರೇಟರ್"**(Fire Operator) ಹುದ್ದೆಯ ನೇರ ನೇಮಕಾತಿ ತರಬೇತಿ, ಪರಿವೀಕ್ಷಣಾ ಅವಧಿ, ಇಲಾಖಾ ಪರೀಕ್ಷೆ ವಿಧಾನಗಳು, ಪದೋನ್ನತಿ ಮಾನದಂಡಗಳನ್ನು ಒಳಗೊಂಡಂತೆ "ಫೈರ್ ಆಪರೇಟರ್ ವೃಂದ & ನೇಮಕಾತಿ ನಿಯಮ" ವನ್ನು ಈ ಪತ್ರದೊಂದಿಗೆ ಲಗತ್ತಿಸಿದ್ದು, ಇಲಾಖೆಯಿಂದ ಸಲ್ಲಿಸಲಾದ ಪ್ರಸ್ತಾವನೆಯನ್ನು ಆಡಳಿತಾತ್ಮಕ ಹಾಗೂ ಆರ್ಥಿಕ ಮಿತವ್ಯಯ ಸಾಧಿಸುವ ಹಿತ ದೃಷ್ಠಿಯಿಂದ ಪ್ರಸ್ತಾವನೆಯನ್ನು ಪರಿಗಣಿಸಿ, ಮಂಜೂರಾತಿ ನೀಡಿ ಆದೇಶ ಹೊರಡಿಸುವಂತೆ ಈ ಮೂಲಕ ಕೋರಲಾಗಿದೆ.

ತಮ್ಮ ವಿಶ್ವಾಸಿ,

ಡಿಜಿಪಿ & ಡಿಜಿ ರವರಿಂದ
ಕರಡು ಅನುಮೋದಿಸಲ್ಪಟ್ಟಿದೆ

Digitally signed by
T N SHIVASHANKARA
Date: 22-01-2026
13:09:05

**(ಟಿ.ಎನ್.ಶಿವಶಂಕರ)**
ನಿರ್ದೇಶಕರು
ಪೊಲೀಸ್ ಮಹಾ ನಿರ್ದೇಶಕರು
ಹಾಗೂ ಮಹಾ ನಿರ್ದೇಶಕರು
ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು
ರವರ ಪರವಾಗಿ

O/C